ಅ)	ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಗೆ ಆಯೋಗದಿಂದ ಸರ್ಕಾರಕ್ಕೆ ಶಿಫಾರಸ್ಸು ಆಗಿರುವ ಪ್ರಕರಣಗಳು i) ಸೇರ್ಪಡೆ ಮಾಡಿ ಸರ್ಕಾರದಿಂದ 01 ಆದೇಶ ಹೊರಡಿಸಿರುವ ಪ್ರಕರಣ ii) ಆಯೋಗದಿಂದ ಸೇರ್ಪಡೆಗೆ 08 ಶಿಫಾರಸ್ಸಾಗಿರುವ ಪ್ರಕರಣಗಳ ಪೈಕಿ, ಸರ್ಕಾರದಿಂದ ಇನ್ನೂ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿರುವ ಪ್ರಕರಣಗಳು	09
ಆ)	ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡುವ ಬಗ್ಗೆ ಆಯೋಗದಿಂದ ತಿರಸ್ಕರಿಸಲ್ಪಟ್ಟ ಪ್ರಕರಣಗಳು	05
ಇ)	ಸಮೀಕ್ಷೆ ನಂತರ ಸೇರ್ಪಡೆ ಕುರಿತು ಪರಿಶೀಲಿಸಲು ತೀರ್ಮಾನಿಸಿರುವ ಪ್ರಕರಣಗಳು	14
ಈ)	ಆಯೋಗದಲ್ಲಿ ತೀರ್ಮಾನವಾಗದೇ ಬಾಕಿ ಉಳಿದಿರುವ ಪ್ರಕರಣಗಳು	04
	ಒಟ್ಟು	**32**

ಸೇರ್ಪಡೆ ಕುರಿತ 8 ಪ್ರಕರಣಗಳು ಒಳಗೊಂಡಂತೆ ಆಯೋಗದ ವರದಿಗಳ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವ ವಿಷಯವು ಪರಿಶೀಲನೆಯಲ್ಲಿರುತ್ತದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನೂತನ ಬಸ್ಸುಗಳ ಖರೀದಿ

192(307); ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸೇರಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕು ವಿಭಾಗಗಳಿಗೆ ನರ್ಮ್ ಯೋಜನೆಯಡಿಯಲ್ಲಿ ಬಸ್ಸುಗಳನ್ನು ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಎಷ್ಟು ಬಸ್ಸುಗಳನ್ನು ಖರೀದಿಸಲು ಪ್ರಸ್ತಾಪಿಸಲಾಗಿದೆ;

ಆ) ಹಾಗಿದ್ದಲ್ಲಿ, ಇದುವರೆವಿಗೂ ನರ್ಮ್ ಯೋಜನೆಯಡಿಯಲ್ಲಿ ಪಡೆದುಕೊಂಡಿರುವ ಬಸ್ಸುಗಳ ಸಂಖ್ಯೆ ಮತ್ತು ಅವುಗಳ ವಿತರಣೆಗಳ ವಿವರ ಒದಗಿಸುವುದು;

ಇ) ರಾಜ್ಯದಲ್ಲಿ ನಗರ ಸಾರಿಗೆ ವ್ಯವಸ್ಥೆಯನ್ನು ನೂತನವಾಗಿ ಪ್ರಾರಂಭಿಸುವ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಹೌದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸೇರಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಾಲ್ಕು ವಿಭಾಗಗಳಿಗೆ ನರ್ಮ ಯೋಜನೆಯಡಿ ಒಟ್ಟು 2104 ಬಸ್ಸುಗಳನ್ನು ಖರೀದಿಸಲು ಪ್ರಸ್ತಾಪಿಸಲಾಗಿದೆ. ವಿವರ ಕೆಳಕಂಡಂತಿದೆ.

ಸಂಸ್ಥೆ	ಬಸ್ಸುಗಳ ಸಂಖ್ಯೆ
ಕರಾರಸಾನಿಗಮ	545
ಬೆಂಮಸಾಸಂಸ್ಥೆ	810
ವಾಕರಸಾಸಂಸ್ಥೆ	420
ಈಕರಸಾಸಂಸ್ಥೆ	329
ಒಟ್ಟು	**2104**

ಆ) ನರ್ಮ ಯೋಜನೆಯಡಿಯಲ್ಲಿ ಖರೀದಿಸಲು ಪ್ರಸ್ತಾಪಿಸಿರುವ ಬಸ್ಸುಗಳನ್ನು ಇನ್ನೂ ಪಡೆದುಕೊಂಡಿರುವುದಿಲ್ಲ. ಬಸ್ಸುಗಳನ್ನು ಪಡೆದುಕೊಂಡ ನಂತರ ಆಯಾ ನಿಗಮಗಳ ವ್ಯಾಪ್ತಿಯಡಿಯಲ್ಲಿನ ನಗರಗಳಿಗೆ ಮಂಜೂರಾತಿ ದೊರಕಿರುವಂತೆ ಈ ಕೆಳಕಂಡಂತೆ ಹಂಚಿಕೆ ಮಾಡಲಾಗುವುದು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿರುವ ನಗರಗಳಿಗೆ ನರ್ಮ ಯೋಜನೆಯಡಿಯಲ್ಲಿ ನಗರ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುವುದು.

ಬೆಳಗಾಂ	60	ಹುಬ್ಬಳ್ಳಿ–ಧಾವಾಡ BRTS	120
ಶಿರಸಿ	20	ಕಾರವಾರ	20
ಚಿಕ್ಕೋಡಿ	20	ಬಾಗಲಕೋಟೆ	20
ಹಾವೇರಿ	10	ರಾಣೆಬೆನ್ನೂರು	20

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ನರ್ಮ ಯೋಜನೆಯಡಿಯಲ್ಲಿ ಒಟ್ಟು 810 ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗುವುದು.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿರುವ ನಗರಗಳಿಗೆ ನರ್ಮ ಯೋಜನೆಯಡಿಯಲ್ಲಿ ನಗರ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುವುದು.

ಗುಲ್ಬರ್ಗಾ	100	ಬಳ್ಳಾರಿ	30
ಬೀದರ್	20	ಬಿಜಾಪುರ	35
ರಾಯಚೂರು	35	ಹೊಸಪೇಟೆ	30
ಕೊಪ್ಪಳ	20	ಸಿಂಧನೂರು	20
ಗಂಗಾವತಿ	25	ಯಾದಗೀರ್	14

ಇ) **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ನಗರ ಸಾರಿಗೆ ಬಸ್ಸುಗಳ ವಿತರಣೆಯನ್ನು ನಗರಾಭಿವೃದ್ಧಿ ಸಚಿವಾಲಯ, ಕೇಂದ್ರ ಸರ್ಕಾರರವರು ಆಯಾ ನಗರಗಳಿಗೆ ಮಂಜೂರು ಮಾಡಿರುವಂತೆ ಕಾರ್ಯಚರಣೆ ಮಾಡಲಾಗುವುದು. ವಿವರ ಕೆಳಕಂಡಂತಿರುತ್ತದೆ.

ಕ್ರ.ಸಂ.	ನಗರಗಳು	ವಾಹನಗಳ ಪರಿಮಾಣ
1	ಮೈಸೂರು	125
2	ತುಮಕೂರು	40
3	ಹಾಸನ	35

4	ಮಂಡ್ಯ	30
5	ರಾಮನಗರ	20
6	ಮಂಗಳೂರು ಹಾಗೂ ಉಡುಪಿ	65
7	ಕೋಲಾರ ಹಾಗೂ ಕೆ.ಜಿ.ಎಫ್	50
8	ದಾವಣಗೆರೆ	50
9	ಭದ್ರಾವತಿ	35
10	ಶಿವಮೊಗ್ಗ	65
11	ಚಿತ್ರದುರ್ಗ	30
ಒಟ್ಟು ವಾಹನಗಳು		**545**

ರಾಜ್ಯದಲ್ಲಿ ನಗರ ಸಾರಿಗೆ ವ್ಯವಸ್ಥೆಯನ್ನು ನೂತನವಾಗಿ ಪ್ರಾರಂಭಿಸಲು ಪ್ರಸ್ತಾಪಿಸಿರುವ ನಗರಗಳು.

ಸಂಸ್ಥೆ	ನಗರಗಳು
ಕರಾರಸಾ ನಿಗಮ	ಚಾಮರಾಜನಗರ ಚಿಕ್ಕಮಗಳೂರು ಚಿಕ್ಕಬಳ್ಳಾಪುರ ಮಡಿಕೇರಿ ಪುತ್ತೂರು
ಬೆಂಮಸಾಸಂಸ್ಥೆ	ಅವಶ್ಯಕತೆ ಇರುವ ಭಾಗದಲ್ಲಿ ನೂತನವಾಗಿ ಪ್ರಾರಂಭಿಸಲಾಗುವುದು.
ವಾಕರಸಾಸಂಸ್ಥೆ	ಚಿಕ್ಕೋಡಿ ಹಾವೇರಿ ಕಾರವಾರ ರಾಣೇಬೆನ್ನೂರು
ಈಕರಸಾಸಂಸ್ಥೆ	ಗಂಗಾವತಿ ಸಿಂದನೂರು